**OS No. 158/2016**
**PW-2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ 24.01.2020

ಮುಂದುವರದ ಪಾಟೀ ಸವಾಲುಃ ಶ್ರೀ. ಪಿ. ಎಸ್. ಎಸ್. ಪ್ರತಿವಾದಿ ಪರ ವಕೀಲರಿಂದ.

1. ಪ್ರತಿವಾದಿಯರ ತಂದೆ 407 ವಾಹನವನ್ನು ಖರೀದಿಸಿದ್ದರಿಂದ ದಾವಾ ಆಸ್ತಿಯನ್ನು ಖರೀದಿಗೆ ಕೊಡಬೇಕಾಯಿತು. ಪ್ರತಿವಾದಿಯರು 407 ವಾಹನವನ್ನು ಖರೀದಿಸಿರಲಿಲ್ಲ ಎಂದರೆ ಸುಳ್ಳು. ಆ ಕಾರಣಕ್ಕಾಗಿ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಿಪಿ–1 ರಲ್ಲಿ ಈ ಕಾರಣವನ್ನು ತೋರಿಸಲು ಯಾವುದೇ ತೊಂದರೆ ಇರಲಿಲ್ಲ.
2. 1 ರಿಂದ 3 ನೇ ಪ್ರತಿವಾದಿಯರು ಕೃಷಿ ವ್ಯವಹಾರವನ್ನು ಮಾಡುತ್ತಿದ್ದರು. 1 ನೇ ಪ್ರತಿವಾದಿ ಕೊಲ್ಲಾಪೂರದ ದೌಲತ ಶುಗರ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 3 ನೇ ಪ್ರತಿವಾದಿ ಸೇನೆಯಲ್ಲಿ ಇದ್ದರು ಈಗ ಕೃಷಿ ಮಾಡುತ್ತಿದ್ದಾರೆ ಎಂದರೆ ಸರಿ. ಮೊದಲಿನಿಂದಲೂ 2 ನೇ ಪ್ರತಿವಾದಿ ಕೃಷಿ ಮಾಡುತ್ತಿದ್ದರು ಎಂದರೆ ಸರಿ. ನಾವು ಮತ್ತು 1 ರಿಂದ 3 ನೇ ಪ್ರತಿವಾದಿಯರು ಈಗಲೂ ಕುದನೂರ ಗ್ರಾಮದಲ್ಲಿ ಜಮೀನು ಹೊಂದಿದ್ದೇವೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಕಬ್ಬು ಬೆಳೆಯುತ್ತೇವೆ ಎಂದರೆ ಸರಿ. 10-12 ಎಕರೆ ಜಮೀನನ್ನು ಪ್ರತಿವಾದಿಯರ ಹಿಸ್ಸೆಗೆ ಇದೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ಆಥಿರ್ಕವಾಗಿ ಸ್ಥಿತಿವಂತರಿದ್ದಾರೆ ಆದ್ದರಿಂದ ಅವರು ನಿಪಿ–1 ನ್ನು ಬರೆದುಕೊಡುವ ಸಂದರ್ಭ ಇರಲ್ಲಿಲ್ಲ. ಸಾಕ್ಷಿ ಮುಂದುವರೆದು ಅವರ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ. ಮೊದಲು ಅವರು ಆರ್ಥಿಕವಾಗಿ ಸ್ಥಿತಿವಂತರಿದ್ದರು ಈಗಲೂ ಅದೇ ರೀತಿ ಸ್ಥಿತಿವಂತರಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಯರು 407 ವಾಹನವನ್ನು

**OS No. 158/2016**
**PW-2**

ಖರೀದಿಸಿದ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲಾ ಮುಂದೆ ಹಾಜರು ಮಾಡುತ್ತೇನೆ. 1 ರಿಂದ 7 ನೇ ಪ್ರತಿವಾದಿಯರು 1985 ಕ್ಕಿಂತ ಮೊದಲೆ ಮದುವೆಯಾಗಿದ್ದರು ಎಂದರೆ ಸರಿ.

3. ನಿಪಿ–1 ರಲ್ಲಿ ಸಿ.ಟಿ.ಎಸ್. ನಂಬರ 4880/25 + 4880/26 ದರ 1/3 ಎಂದು ಬರೆದಿಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಮನೆ ನಂಬರ 244/112 ಎಂದು ಬರೆಯಲಾಗಿದೆ. ಸಿ.ಟಿ.ಎಸ್. ನಂಬರ 4880/25 + 4880/26 ದರ 1/3 ಎಂದು ಬರೆಯಲು ಯಾವುದೇ ತೊಂದರೆ ಇರಲಿಲ್ಲ ಆದರೆ ಆ ಸಮಯದಲ್ಲಿ ದಾಖಲೆ ಬರೆದ ವ್ಯಕ್ತಿಗೆ ಆ ನಂಬರ ಗೊತ್ತಿತ್ತೊ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ತೋರಿಸಿರುವ ಚೆಕ್ಕುಬಂದಿ ಸಿ.ಟಿ.ಎಸ್. ನಂಬರ 4880/25 + 4880/26 ದರ 1/3 ಗೆ ಸಂಬಂಧಿಸಿದ್ದು ಅಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಂಪೂರ್ಣ ದಾವಾ ಆಸ್ತಿಗೆ ಸಂಬಂಧಿಸಿದ್ದಾಗಿರುತ್ತದೆ.

4. ನಿಪಿ–1 ರ ಪ್ರಕಾರ 1 ರಿಂದ 3 ನೇ ಪ್ರತಿವಾದಿಯರ ತಂದೆ 30,151/- ಹಣ ಪಡೆದಿಲ್ಲಾ ಎಂದರೆ ಸುಳ್ಳು. ನನ್ನ ತಂದೆ 5,000/- ಹಣವನ್ನು 1 ರಿಂದ 3 ನೇ ಪ್ರತಿವಾದಿಯರ ತಂದಗೆ 1997-98 ರಂದು ಕೊಟ್ಟಿರಬಹುದು ದಿನಾಂಕ ಮತ್ತು ವರ್ಷ ನಿಖರವಾಗಿ ನನಗೆ ಗೊತ್ತಿಲ್ಲ. ಉಳಿದ 15,000/- ರೂ. ಅನ್ನು 17.05.1999 ರಂದು 1 ರಿಂದ 3 ನೇ ಪ್ರತಿವಾದಿಯರ ತಂದೆಗೆ ಕೊಟ್ಟಿದ್ದಾರೆ. ಮೇಲೆ ಹೇಳಿದಂತೆ ನನ್ನ ತಂದೆ ಆ ದಿನಾಂಕದಂದು ಹಣವನ್ನು ಕೊಟ್ಟಿಲ್ಲಾ ಎಂದರೆ ಸುಳ್ಳು.

5. ನಿಪಿ–3 ರಲ್ಲಿ ನಿಪಿ–1 ಬರೆದ ಬಗ್ಗೆ ಉಲ್ಲೇಖಿಸಿಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಹಣ ಅಡವಾನ್ಸ ನೀಡಿದ ಬಗ್ಗೆ ಬರೆಯಲಾಗಿದೆ. ನಿಪಿ–3 ರಲ್ಲಿ ಸೂಚಿತಾ ಲಕ್ಷ್ಮಣ ತಾಂದಳೆ ಎನ್ನುವವರು ಸಾಕ್ಷಿಯಾಗಿ ಸಹಿ

ಮಾಡಿರುತ್ತಾರೆ. ಆಕೆ ಕುದನೂರ ಗ್ರಾಮದಲ್ಲಿ ವಾಸಮಾಡುತ್ತಾಳೆ. ನಿಪಿ–3 ರಲ್ಲಿರುವ ಹೆಬ್ಬಟ್ಟಿನ ಗುರುತು 1 ರಿಂದ 3 ನೇ ಪ್ರತಿವಾದಿಯರ ತಂದೆಯದ್ದು ಅಲ್ಲಾ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಆ ದಾಖಲೆಯ ಮೇಲೆ 1 ರಿಂದ 3 ನೇ ಪ್ರತಿವಾದಿಯರು ಸಹ ತಮ್ಮ ಸಹಿಯನ್ನು ಮಾಡಿದ್ದಾರೆ.

6. 1 ರಿಂದ 3 ನೇ ಪ್ರತಿವಾದಿಯರ ತಂದೆ ಯಾವ ರೋಗದಿಂದ ಬಳಲುತ್ತಿದ್ದರು ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ಆದರೆ ಅವರು ಸಾಮಾನ್ಯವಾಗಿ ನಿಶಕ್ತರಿರುತ್ತಿದ್ದರು. ಸಾಕ್ಷಿ ಮುಂದುವರೆದು ಅವರು ವಯಸ್ಸಾಗಿದ್ದರಿಂದ ನಿಶಕ್ತರಿರುತ್ತಿದ್ದರು. 1 ರಿಂದ 3 ನೇ ಪ್ರತಿವಾದಿಯರ ತಂದೆ ಸಹಜ ಸಾವನ್ನು ಹೊಂದಿದರು ಎಂದರೆ ಸರಿ. ಆತ ಮರಣಹೊಂದಿದಾಗ ಆತನಿಗೆ 70 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಆತ ಕುದನೂರ ಗ್ರಾಮದ ತನ್ನ ಮನೆಯಲ್ಲಿ ಮರಣ ಹೊಂದಿದರು. 1 ರಿಂದ 3 ನೇ ಪ್ರತಿವಾದಿಯರ ತಂದೆ 12.06.1999 ರಂದು ಮರಣ ಹೊಂದಿದರು. ಸಾಕ್ಷಿಗೆ ಈಗ 1 ರಿಂದ 3 ನೇ ಪ್ರತಿವಾದಿಯರ ತಂದೆಯ ಮರಣ ಪ್ರಮಾಣ ಪತ್ರವನ್ನು ತೋರಿಸಿ ಅದರ ಪ್ರಕಾರ ಅವರ ತಂದೆ 27.05.1999 ರಂದು ಮರಣ ಹೊಂದಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನ್ನ ಬಳಿ 12.06.1999 ರಂದು ಮರಣ ಹೊಂದಿದ್ದಾರೆ ಎಂದು ಮರಣ ಪ್ರಮಾಣ ಪತ್ರ ಇದೆ. ನಿಪಿ–3 ನ್ನು ದಿನಾಂಕ 25.05.1999 ರಂದು ಬರೆಯಲಾಗಿದೆ. ನಾನು ತೋರಿಸಿದ ಮರಣ ಪ್ರಮಾಣ ಪತ್ರದ ಪ್ರಕಾರ ನಿಪಿ–3 ಬರೆದ ಎರಡು ದಿನದ ನಂತರ 1 ರಿಂದ 3 ನೇ ಪ್ರತಿವಾದಿಯರ ತಂದೆ ಮರಣ ಹೊಂದಿದ್ದಾರೆ ಎಂದರೆ ಸರಿ.

7. ನಿಪಿ–1 ಬರೆದ ನಂತರ 25.05.1999 ರ ಮಧ್ಯದ ಅವಧಿಯಲ್ಲಿ 1 ರಿಂದ 3 ನೇ ಪ್ರತಿವಾದಿಯರ ತಂದೆಯನ್ನು ಖರೀದಿ ಪತ್ರ ಬರೆದುಕೊಡಲು ಮೌಖಿಕವಾಗಿ ಕೇಳಿಕೊಂಡಿದ್ದೇವು. ಈ ಅವಧಿಯಲ್ಲಿ ನನ್ನ ತಂದೆ ಪ್ರತಿವಾದಿಯರ ತಂದಗೆ ಖರೀದಿ ಪತ್ರ ಬರೆದುಕೊಡು ಎಂದು ಕೇಳಿ ಕಾನೂನು ತಿಳುವಳಿಕೆ ನೋಟಿಸನ್ನು ಕಳುಹಿಸಿರಲಿಲ್ಲ. ಆದರೆ ಮೌಖಿಕವಾಗಿ ಕೇಳಿಕೊಂಡಿದ್ದೇವು.

8. 1 ರಿಂದ 3 ನೇ ಪ್ರತಿವಾದಿಯ ತಂದೆ ಮರಣ ಹೊಂದುತ್ತಾನೆ ಎಂಬ ಅನುಮಾನದಲ್ಲಿ ಆತನಿಗೆ ಗೊತ್ತಾಗದ ರೀತಿಯಲ್ಲಿ ನಿಪಿ–3 ನ್ನು ನನ್ನ ತಂದೆ ಬರೆಸಿಕೊಂಡಿದ್ದಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಿಪಿ–3 ನ್ನು ಬರೆದುಕೊಟ್ಟಾಗ ಅವರ ತಂದೆ ಸಮಸ್ಥಿತಿಯಲ್ಲಿ ಇದ್ದರು. ಅವರೇ 3 ನೇ ಪ್ರತಿವಾದಿಗೆ ಹೇಳಿ ನಿಪಿ–3 ಬಾಂಡ ಪತ್ರವನ್ನು ತರಿಸಿದ್ದರು.

> ಪ್ರಶ್ನೆಃ ನಿಪಿ–3 ರಲ್ಲಿ 1 ರಿಂದ 3 ನೇ ಪ್ರತಿವಾದಿಯರ ತಂದೆಯ ಸಹಿಯನ್ನು ಪಡದುಕೊಳ್ಳಲು ಯಾವುದೇ ತೊಂದರೆ ಇತ್ತಾ?
> ಉತ್ತರಃ ಆತ ನಿಶಕ್ತ ಇದ್ದುದರಿಂದ ತನ್ನ ಹೆಬ್ಬಟ್ಟಿನ ಗುರುತನ್ನು ಓತ್ತಿದ್ದನು ಮತ್ತು ಆತನ ಸಹಿ ದೊಡ್ಡದಿರುವುದರಿಂದ ಆತ ಹೆಬ್ಬಟ್ಟಿನ ಗುರುತನ್ನು ಓತ್ತಿದ್ದನು.

9. 1 ರಿಂದ 3 ನೇ ಪ್ರತಿವಾದಿಯರ ತಂದೆ ತನ್ನ ಕೊನೆಯ 15-20 ದಿನಗಳನ್ನು ಮಲಗಿಯೇ ಕಳೆದಿದ್ದ ಆತನಿಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸುಳ್ಳು.

10. ನನ್ನ ತಂದೆ ಮೊದಲು ಚೌಗುಲೆ ಮೈನ್ಸ, ಗೋವಾದಲ್ಲಿ ಕೆಲಸ ಮಾಡುತ್ತಿದ್ದರು ತದನಂತರ ಕೃಷಿ ಮಾಡುತ್ತಿದ್ದಾರೆ. ಎಷ್ಟು ವರ್ಷ ಅವರು ಅಲ್ಲಿ ಕೆಲಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲಾ. ನಾನು 1991 ರಲ್ಲಿ ನನ್ನ 10 ನೇ ತರಗತಿಯನ್ನು ಮುಗಿಸಿದ್ದೇನೆ. 2010 ರಲ್ಲಿ ನಾನು ನನ್ನ

ಗ್ರಾಜ್ಯುಏಷನ ಮುಗಿಸಿದ್ದೇನೆ ಮಧ್ಯದ ಅವಧಿಯಲ್ಲಿ ನಾನು ವಿದ್ಯಾಭ್ಯಾಸ ಮಾಡಿರಲಿಲ್ಲ.

11. ನಿಪಿ–1 ನ್ನು ಬರೆಯುದಕ್ಕಿಂತ ಮೊದಲು ಆಗುತ್ತಿದ್ದ ಮಾತುಕತೆಯ ಸಮಯದಲ್ಲಿ ನಾನು ಹಾಜರು ಇದ್ದೆ. ನಿಪಿ–3 ನ್ನು ಬರೆದಾಗ ನಾನು ಖುದ್ದಾಗಿ ಸ್ಥಳದಲ್ಲಿ ಹಾಜರು ಇರಲಿಲ್ಲ. ನನ್ನ ತಂದೆ ಸಹ ನಿಪಿ–3 ನ್ನು ಖುದ್ದಾಗಿ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸುಳ್ಳು. ನನ್ನ ತಂದೆಯ ನಿಪಿ–3 ಕ್ಕೆ ಸಹಿ ಮಾಡಿರುವುದಿಲ್ಲಾ ಆದ್ದರಿಂದ ಆತ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸುಳ್ಳು. ನಿಪಿ–3 ನ್ನು ಬೆಳಗಾವಿಯಲ್ಲೇ ಬರೆಯಲಾಗಿತ್ತು. ಅದನ್ನು ತದನಂತರ ಕುದನೂರ ಗ್ರಾಮಕ್ಕೆ 3 ನೇ ಪ್ರತಿವಾದಿಯೇ ತೆಗೆದುಕೊಂಡು ಹೋಗಿ ಸಹಿ ಮಾಡಿಸಿದ್ದರು. 3 ನೇ ಪ್ರತಿವಾದಿ ನಿಪಿ–3 ಬಾಂಡ ಖರೀದಿಸಿರುವುದಿಲ್ಲ ಮತ್ತು ಬರೆಸಿಲ್ಲಾ ಹಾಗೂ ಸಹಿಗಾಗಿ ಕುದನೂರ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಸಹಿ ಮಾಡಿಸಿಲ್ಲಾ ಎಂದರೆ ಸುಳ್ಳು. ನಿಪಿ–3 ಬಾಂಡನ್ನು ಸುಮನರಾವ ಪವಾರ ಎನ್ನುವವರು ಖರೀದಿಸಿದ್ದರು ಮತ್ತು 3 ನೇ ಪ್ರತಿವಾದಿ ಆ ಪತ್ರವನ್ನು ಖರೀದಿಸಿಲ್ಲಾ ಎಂದರೆ ಸುಳ್ಳು. ನಿಪಿ–1 ನ್ನು ಬರೆದಾಗ ನಾನು ಖುದ್ದಾಗಿ ಸ್ಥಳದಲ್ಲಿ ಇದ್ದೆ ಆದ್ದರಿಂದ ದಾಖಲೆ ಬರೆದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಆದರೆ ನಿಪಿ–3 ಬರೆದಾಗ ನಾನು ಸ್ಥಳದಲ್ಲಿ ಇರಲಿಲ್ಲ ಆದರೆ ಆ ದಾಖಲೆ ಬರೆದ ಬಗ್ಗೆ ಎಲ್ಲಾ ಮಾಹಿತಿಯನ್ನು ನನ್ನ ತಂದೆಯಿಂದ ಪಡೆದುಕೊಡಿದ್ದೇನೆ.

12. ದಾವಾ ಆಸ್ತಿಯಲ್ಲಿ ಮಣ್ಣಿನ ಮನೆ ಇದೆ. ಆ ಮಣ್ಣಿನ ಮನೆಗೆ ಮಂಗಳೂರಿನ ರೇಡ ಟೈಲ್ಸ ಹಾಕಲಾಗಿದೆ. ನಿಪಿ–3 ಬರೆದಾಗಿನಿಂದ ದಾವಾ ಆಸ್ತಿಯಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ. ಆದರೆ ಇದ್ದದ

**OS No. 158/2016**
**PW-2**

ಕಟ್ಟಡವನ್ನು ಆಗಾಗ ದುರಸ್ತಿ ಮಾಡಲಾಗಿದೆ ಎಂದರೆ ಸರಿ. ನಿಪಿ–1 ಮತ್ತು ನಿಪಿ–3 ನ್ನು ಬರೆಸಿಕೊಂಡಾಗಿನಿಂದ ಇಲ್ಲಿಯವರೆಗೂ ದಾವಾ ಆಸ್ತಿಯನ್ನು ಖರೀದಿಸಲು ನಾವು ತಯಾರಿಲ್ಲಾ ಎಂದರೆ ಸುಳ್ಳು. ನಿಪಿ–1 ಮತ್ತು ನಿಪಿ–3 ನ್ನು ಖೊಟ್ಟಿಯಾಗಿ ಸೃಷ್ಟಿಸಲಾಗಿದೆ ಎಂದರೆ ಸುಳ್ಳು. ಅವರ ಆಸ್ತಿಯನ್ನು ಕಾನೂನು ಬಾಹಿರವಾಗಿ ಪಡೆಯಲು ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಮತ್ತು ಜೆ. ಎಂ. ಎಫ್. ಸಿ., ಬೆಳಗಾವಿ.